**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 473/ 2022**

**ಸಿಡಬ್ಲ್ಯೂ: 03**
**ಪಿಡಬ್ಲ್ಯೂ: 02**

| | | |
|---|---|---|
| ಸಾಕ್ಷಿದಾರರ ಹೆಸರು | : | ನಂದಿನಿ |
| ಗಂಡನ ಹೆಸರು | : | ರಮೇಶ್ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಪುತ್ತೂರು |

ಸಾಕ್ಷಿಗೆ ದಿನಾಂಕಃ 23.09.2023 ರಂದು ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ

ಒಂದನೇ ಆರೋಪಿ ನನ್ನ ತಂಗಿಯ ಗಂಡ. 2 ನೇ ಆರೋಪಿ 1 ನೇ ಆರೋಪಿಯ ತಾಯಿ, 3 ಮತ್ತು 4 ನೇ ಆರೋಪಿತರು 1 ನೇ ಆರೋಪಿ ಸಂಬಂಧಿಕರು. ಚಾಸಾ – 1 ನನ್ನ ತಂಗಿ, ಚಾಸಾ – 2 ನನ್ನ ತಾತ, ಚಾಸಾ – 5 ನಮ್ಮ ಸೋದರ ಮಾವ, ಚಾಸಾ – 6 ರಿಂದ 8 ನನ್ನ ಸಂಬಂಧಿಕರು, ಚಾಸಾ – 9 ರಿಂದ 14 ನಮ್ಮ ಊರಿನವರು.

ಈಗ್ಗೆ ಒಂದುವರೆ ವರ್ಷದ ಹಿಂದೆ ನನ್ನ ತಂಗಿಯನ್ನು 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಮದುವೆ ಸಮಯದಲ್ಲಿ ಎರಡುವರೆ ಲಕ್ಷ ರೂಪಾಯಿ ನಗದು ಹಾಗೂ ನಾಲ್ಕುವರೆ ಗ್ರಾಂ ಚಿನ್ನ ಹಾಗೂ ಬಟ್ಟೆಗಳನ್ನು ಕೊಟ್ಟು ಚಾಮರಾಜನಗರದ ಅನ್ವರ್ ಪಾಷ ಕಲ್ಯಾಣ ಮಂಟಪದಲ್ಲಿ ಸಂಪ್ರದಾಯದಂತೆ ಮದುವೆ ಮಾಡಿಕೊಟ್ಟಿರುತ್ತೇವೆ.

ಸಿ.ಸಿ. ನಂ. 473/2022

ಸಿಡಬ್ಲ್ಯೂ: 03 ಪಿಡಬ್ಲ್ಯೂ: 02

ಮದುವೆಯಾದ ಸ್ವಲ್ಪ ದಿನಗಳವರೆಗೆ 1 ನೇ ಆರೋಪಿ ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡಿದ್ದು, ನಂತರದಲ್ಲಿ ನನ್ನ ತಾತನ ಮನೆಯಿಂದ ಆಸ್ತಿ ಹಾಗೂ ಎಂಟುವರೆ ಲಕ್ಷ ರೂಪಾಯಿ ವರದಕ್ಷಿಣೆಯನ್ನು ತರುವಂತೆ ಪೀಡಿಸುತ್ತಿದ್ದನು. 2 ರಿಂದ 4 ನೇ ಆರೋಪಿತರು ನನ್ನ ತಂಗಿಗೆ ಅವಳು ಹೆಣ್ಣಿನ ತರ ಇಲ್ಲ, ನನ್ನ ಮಗನಿಗೆ ಬೇರೆ ಮದುವೆ ಮಾಡುತ್ತೇವೆ ಎಂದು ಜಗಳ ಮಾಡುತ್ತಿದ್ದರು. ಆರೋಪಿತರು ನನ್ನ ತಂಗಿ ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದಾಳೆ ಎಂದು ಶೀಲವನ್ನು ಶಂಕಿಸಿ ಮಾತನಾಡುತ್ತಿದ್ದರು. ನನ್ನ ತಂಗಿ ಒಂದುವರೆ ತಿಂಗಳು ಗರ್ಭಿಣಿಯಾದಾಗ ತಾತನ ಮನೆಗೆ ತಂದು ಬಿಟ್ಟು ಹೋಗಿದ್ದು ವಾಪಸ್ಸು ಕರೆದುಕೊಂಡು ಹೋಗಿರುವುದಿಲ್ಲ.

ನಮ್ಮ ಗ್ರಾಮದ ಯಜಮಾನರು ಹಾಗೂ ಆರೋಪಿತರ ಗ್ರಾಮದ ಯಜಮಾನರು ನ್ಯಾಯಪಂಚಾಯಿತಿ ಮಾಡಿಸಿದರೂ ಕೂಡ ನನ್ನ ತಂಗಿಯನ್ನು ಗರ್ಭಾವಸ್ಥೆಯಲ್ಲೂ ಕೂಡ ಬಂದು ಮಾತನಾಡಿಸಿರುವುದಿಲ್ಲ. ಮಗುವಾದ ನಂತರ 1 ರಿಂದ 3 ನೇ ಆರೋಪಿತರು ಅರ್ಧ ಗಂಟೆಯವರೆಗೆ ಮಾತ್ರ ನಿಂತು ಮಾತನಾಡಿಸಿ ವಾಪಸ್ಸು ಹೋಗಿದ್ದು ನಂತರದಲ್ಲಿ ಬಂದಿರುವುದಿಲ್ಲ. ನನ್ನ ತಂಗಿಗೆ ಆರೋಪಿತರು ಹಿಂಸೆ ನೀಡಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಕಾರಣವಿಲ್ಲದ ಕಾರಣ ತಿರಸ್ಕರಿಸಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ.